**ಅಸಲು ದಾವಾ ನಂಃ 23 /2022**
**ಪಿ.ಡಬ್ಲ್ಯೂಃ 1, ಶರಣಮ್ಮಾ**

<u>ದಿನಾಂಕ :**30-01-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.</u>

<u>ಮುಂದುವರೆದ ಪಾಟಿ ಸವಾಲು :- ಶ್ರೀ ಸಿ. ಬಿ. ಎ. ವಕೀಲರಿಂದ :</u>

ಸ.ನಂ:591 ಮತ್ತು 594 ಜಮೀನುಗಳನ್ನು ದೇವಿಂದ್ರಪ್ಪ ಖರಿದಿ ಮಾಡಿದಾಗ ನನ್ನ ತಂದೆ ಜೀವಂತ ಇದ್ದರು ಎಂದರೆ ಸಾಕ್ಷಿ ನನ್ನ ತಂದೆ ಖರಿದಿ ಮಾಡಿದ್ದು ಜೀವಂತ ಇದ್ದರು ಎಂದು ಹೇಳುತ್ತಾರೆ. ಈ ಸ್ವತ್ತಗಳನ್ನು ಮಹಾದೇವನ ಹೆಸರಿಗೆ ವರ್ಗಾವಣೆ ಮಾಡಲು ಪಂಚಾಯತಿ ಸೇರಿದಾಗ ನಾನು ಕೂಡಾ ಸಮ್ಮತಿ ಕೊಟ್ಟಿದ್ದೆ ಎಂದರೆ ಸುಳ್ಳು ಎಂದು ಹೇಳುತ್ತಾರೆ. ನಾನು ಸಹಿ ಮಾಡಿಲ್ಲಾ ಎಂದು ಹೇಳುತ್ತಾರೆ. ಆ ಸಮಯದಲ್ಲಿ ಶರಣಬಸಪ್ಪ ತಂದೆ ಅಯ್ಯಪ್ಪ, ಮಲ್ಲಣ್ಣ ತಂದೆ ಸಿದ್ದಪ್ಪ, ರಸೂಲಸಾಬ ತಂದೆ ಹುಸೇನ ಸಾಬ ಇವರ ಸಮಕ್ಷಮ ಸಹಿ ಮಾಡಿದ್ದೇನೆ ಎಂದರೆ ಸುಳ್ಳು ಎಂದು ಹೇಳುತ್ತಾರೆ. ಅದೇ ರೀತಿ ಕಂದಾಯ ಅಧಿಕಾರಿಗಳ ಸಮಕ್ಷಮ ಸಹಿ ಮಾಡಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ನಾನು ಸಮ್ಮತಿ ಸುಉಚಿಸಿದ ನಂತರ ಆ ದಾಖಲೆ ಆಧಾರದ ಮೇಲೆ ಮಹಾದೇವ್ಮನ ಹೆರಿಗೆ ವರ್ಗಾವಣೆ ಆಯಿತು ಎಂದರೆ ಸಾಕ್ಷಿ ಸುಳ್ಳು ಎಂದು ಹೇಳುತ್ತಾರೆ. ಆ ನಾತೆಯಿಂದ ಸುಮಾರು 20 ರಿಂದ 25 ವರ್ಷಗಳಿಂದ ಅವರೇ ಕಬ್ಜೆಯಲ್ಲಿದ್ದು ಉಳುಮೆ ಮಾಡುತ್ತಿದ್ದಾರೆ ಎಂದು ಸೂಚಿಸುವುದು ಸರಿಯಲ್ಲ. ಸದರಿ ಖಾತೆ ಬದಲಾವಣೆ ಆಗಿದ್ದು ತಪ್ಪು ಎಂದು ಪ್ರಶ್ನಿಸಿ ಕಂದಾಯ ಅಧಿಕಾರಿಗಳ ಮುಂದೆ ಎಲ್ಲಿಯೂ ಮನವಿ ಸಲ್ಲಿಸಿಲ್ಲಾ. ಮನೆ ನಂಬರ: 1-76 ಮತ್ತು 1-89 ಇವುಗಳ ಚೆಕ್ ಬಂದಿ ಹೇಳಲು ಆಗುವುದಿಲ್ಲಾ. ಈ ಎರಡೂ ಸ್ವತ್ತುಗಳನ್ನು ಸುಬಣ್ಣ ಇವರು ಸ್ವಂತ ಗಳಿಕೆ ಮಾಡಿ ಖರಿದಿ ಮಾಡಿದ್ದಾರೆ ಎಂದು ಸೂಚಿಸಿವುದು ಸರಿಯಲ್ಲ. ಸದರಿ ಸ್ವತ್ತಗಳು ಈಗ ಯಾರ ಹೆಸರಿಗೆ ಇದೆ ಎಂದು ನನಗೆ ಗೊತ್ತಿಲ್ಲಾ.

ಕೆಎ-32-ಟಿಎ-8918 /8919 ಟ್ರಾಕ್ಟರ ಮತ್ತು ಟ್ರಾಲಿ ಇದು ಯಾರ ಹೆಸರಿನಲ್ಲಿ ಇದೆ ಎಂದು ನನಗೆ ಗೊತ್ತಿಲ್ಲಾ. ಸದರಿ ವಾಹನವನ್ನು 3 ಮತ್ತು 4 ನೇ ಪ್ರತಿವಾದಿಗಳು ತಮ್ಮ ಸ್ವಂತ ಗಳಿಕೆಯಿಂದ ಅವರ ತಾಯಿಯ ಹೆರಿನಲ್ಲಿ ಖರಿದಿ ಮಾಡಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಎಂದು ಹೇಳುತ್ತಾರೆ. ಸದರಿ ವಾಹನ ಖರಿದಿ ಮಾಡಲು ಗುಲಬರ್ಗಾ ಬ್ಯಾಂಕಿನಲ್ಲಿ ರೂ. 9,00,000/- ಸಾಲ ಪಡೆದು ಖರಿದಿ ಮಾಡಿದ್ದು ಆ ಸಾಲವನ್ನು ಅವರೇ ತಿರಿಸಿದ್ದಾರೆ ಎಂದರೆ ಸಾಕ್ಷಿ ಸಾಲು ಯಾವುದು ಇಲ್ಲಾ ಅದು ಸುಳ್ಳು ಎಂದು ಹೇಳುತ್ತಾರೆ. ಈ ದಾವಾ ಸ್ವತ್ತಗಳನ್ನು ಎಲ್ಲವೂ ನನ್ನ ತಮ್ಮ ಖರಿದಿ ಮಾಡಿದ್ದು ನಾವು ಎಲ್ಲರೂ ಒಪ್ಪಿದ ನಂತರ 1 ನೇ ಪ್ರತಿವಾದಿ ಹೆಸರಿಗೆ ಖಾತಾ ಬದಲಾವಣೆ ಮಾಡಲಾಯಿತು ಎಂದು ಸೂಚಿಸುವುದು ಸುಳ್ಳು ಎಂದು ಹೇಳುತ್ತಾರೆ.

**ಅಸಲು ದಾವಾ ನಂಃ 23 /2022**
**ಪಿ.ಡಬ್ಲ್ಯೂಃ 1, ಶರಣಮ್ಮಾ**

ನನ್ನ ಗಂಡನ ಊರು ಯಾವುದು ಎಂದು ನನಗೆ ನೆನೆಪಿಲ್ಲಾ ಎಂದು ಹೇಳುತ್ತಾರೆ. ನನ್ನ ಗಂಡನನ್ನು ನ್ನನ ತಂದೆ ತಾಯಿ ಡೋಣಗಾಂವಗೆ ಕರೆದುಕೊಂಡು ಬಂದು ನೋಡಿಕೊಂಡಿದ್ದರು ಎಂದರೆ ಸುಳ್ಳು ಎಂದು ಹೇಳುತ್ತಾರೆ. ಆಗ ನನ್ನ ತಂದೆ ತಾಯಿ ನನ್ನ ಗಂಡನ ಜೊತೆ 1 ನೇ ಪ್ರತಿವಾದಿಯ ಮದುವೆಯನ್ನು ಮಾಡಿದ್ದರು ಎಂದರೆ ಸಾಕ್ಷಿ ನಾನು ಒಪ್ಪಿರಲಿಲ್ಲಾ ಜೋರು ಮಾಡಿ ಮಾಡಿದ್ದರು ಎಂದು ಹೇಳುತ್ತಾರೆ. ನನಗೆ ಮನೆ ಮತ್ತು ಆಸ್ತಿ ಇದೆ ಎಂದರೆ ಸಾಕ್ಷಿ ಯಾವುದು ಇಲ್ಲಾ ಎಂದು ಹೇಳುತ್ತಾರೆ. ನನ್ನ ಹಾಗೂ 1 ನೇ ಪ್ರತಿವಾದಿ ನಡುವೆ ಭಿನ್ನಾಭಿಪ್ರಾಯ ಬಂದು ದುರಾಸೆಯಿಂದ ಆಸ್ತಿ ಕಬಳಿಸಬೇಕೆಂದು ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರನೆ : ಇಲ್ಲಾ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
**ಚಿತ್ತಾಪೂರ.**